5) ಕೆಲವೊಂದು ಸ್ವತ್ತಿನ ಅಪರಾಧಗಳಲ್ಲಿ ಅಲೆಮಾರಿ ಜನಾಂಗದವರು ಇದ್ದು ನಿಖರವಾಗಿ ಒಂದೇ ಸ್ಥಳದಲ್ಲಿ ವಾಸವಾಗಿರದೆ ಇರುವುದು.

6) ಕೆಲವು ಆರೋಪಿಗಳು ವಿಳಾಸವನ್ನು ಬಿಟ್ಟು ಹೊರ ರಾಜ್ಯಕ್ಕೆ ದುಡಿಮೆಯ ಮೇಲೆ ಹೋಗಿರುವುದು

ಇಂತಹ ಪ್ರಕರಣಗಳಲ್ಲಿ, ವಯಸ್ಸು ನೂರು ದಾಟಿದ ಆರೋಪಿಗಳ 8 ಪ್ರಕರಣಗಳಿದ್ದು ವಿವರಗಳನ್ನು ಅನುಬಂಧ 'ಅ' ನಲ್ಲಿ ನೀಡಲಾಗಿದೆ.

ಒಇ 47 ಪಿಸಿಕ್ಯೂ 2012

(ಆರ್. ಅಶೋಕ್)
ಉಪ ಮುಖ್ಯಮಂತ್ರಿಗಳು

ಕರ್ನಾಟಕ ವಿಧಾನ ಸಭೆ
860

ಶ್ರೀ ರೇವಣ್ಣ ಹೆಚ್.ಡಿ. (ಹೊಳೆನರಸೀಪುರ)

ಅ) ನಿರಂತರ ಜ್ಯೋತಿ ಯೋಜನೆ ರಾಜ್ಯದಲ್ಲಿ ಜಾರಿಗೆ ಬಂದಿದ್ದು ಯಾವಾಗ; ಇದಕ್ಕಾಗಿ ಮೀಸಲಿಟ್ಟ ಹಣವೆಷ್ಟು; ಬಿಡುಗಡೆಯಾದ ಹಣವೆಷ್ಟು; ಖರ್ಚಾದ ಹಣವೆಷ್ಟು; (ಪೂರ್ಣ ಮಾಹಿತಿ ನೀಡುವುದು)

ಆ) ನಿರಂತರ ಜ್ಯೋತಿ ಯೋಜನೆ ಈಗಾಗಲೇ ಚಾಲ್ತಿಯಲ್ಲಿರುವ ಪ್ರದೇಶಗಳಾವುವು? (ವಿಧಾನಸಭಾವಾರು ಮಾಹಿತಿ ನೀಡುವುದು)

ಇಂಧನ ಸಚಿವರು

ಅ) ಕರ್ನಾಟಕ ರಾಜ್ಯದಲ್ಲಿ ಗ್ರಾಮೀಣ ಪ್ರದೇಶಗಳ ಕೃಷಿಯೇತರ ಸ್ಥಾವರಗಳಿಗೆ ನಿರಂತರ ಹಾಗೂ ಉತ್ತಮ ಗುಣಮಟ್ಟದ ವಿದ್ಯುತ್ ಸರಬರಾಜು ಮಾಡಲು "ನಿರಂತರ ಜ್ಯೋತಿ" ಯೋಜನೆಯು 2009–10 ನೇ ಸಾಲಿನಿಂದ ಜಾರಿಯಲ್ಲಿರುತ್ತದೆ.

ಈ ಯೋಜನೆಯನ್ನು ಎರಡು ಹಂತಗಳಲ್ಲಿ ಅನುಷ್ಠಾನಗೊಳಿಸಲು ನಿರ್ಧರಿಸಲಾಗಿದೆ. ಈ ಯೋಜನೆಯ ಮೊದಲನೆಯ ಹಂತಕ್ಕೆ ತಗಲುವ ವೆಚ್ಚ ರೂ 1203 ಕೋಟಿಗಳಾಗಿದ್ದು, ಎರಡನೇ ಹಂತಕ್ಕೆ ತಗಲುವ ವೆಚ್ಚ ರೂ. 920 ಕೋಟಿಗಳಾಗಿರುತ್ತವೆ. ಒಟ್ಟು ಯೋಜನೆಯ ಮೊತ್ತ ರೂ. 2123 ಕೋಟಿಗಳಾಗಿರುತ್ತದೆ. ಅನುಮೋದಿತವಾಗಿರುವಂತೆ ಯೋಜನೆಯ ಶೇಕಡ 40

ರಷ್ಟು ವೆಚ್ಚವನ್ನು ವಿತರಣಾ ಕಂಪನಿಗಳು ಸಾಲದ ರೂಪದಲ್ಲಿ ಭರಿಸುಸುವುದಾಗಿರುತ್ತದೆ. ಈ ಯೋಜನೆಗೆ ರಾಜ್ಯ ಸರ್ಕಾರದಿಂದ ಮಾರ್ಚ್–2012 ಅಂತ್ಯಕ್ಕೆ ಒಟ್ಟು ರೂ 359.32 ಕೋಟಿಗಳು ಈಕ್ವಿಟಿ ರೂಪದಲ್ಲಿ ಬಿಡುಗಡೆಯಾಗಿದ್ದು, ರೂ. 509.05 ಕೋಟಿಗಳನ್ನು ವಿತರಣಾ ಕಂಪನಿಗಳು ತಮ್ಮ ಭಾಗವನ್ನು ಸೇರಿಸಿ ವೆಚ್ಚ ಮಾಡಿರುತ್ತದೆ.

ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯ ವ್ಯಾಪ್ತಿಯಲ್ಲಿ ನಿರಂತರ ಜ್ಯೋತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿಲ್ಲ.

ಆ) ರಾಜ್ಯದಲ್ಲಿ ನಿರಂತರ ಜ್ಯೋತಿ ಯೋಜನೆಯು ಚಾಲ್ತಿಯಲ್ಲಿರುವ ವಿಧಾನ ಸಭಾ ಕ್ಷೇತ್ರಗಳ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಸಂಖ್ಯೆ : ಇಎನ್ 130 ಪಿಪಿಎಂ 2012

(ಶೋಭಾ ಕರಂದ್ಲಾಜೆ)
ಇಂಧನ ಸಚಿವರು

ಕರ್ನಾಟಕ ವಿಧಾನ ಸಭೆಯ ಮಾನ್ಯ ಸದಸ್ಯರಾದ ಶ್ರೀ ಹೆಚ್.ಡಿ. ರೇವಣ್ಣ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 860 ಕ್ಕೆ ಅನುಬಂಧ : –
ನಿರಂತರ ಜ್ಯೋತಿ ಯೋಜನೆ ಈಗಾಗಲೇ ಚಾಲ್ತಿಯಲ್ಲಿರುವ ವಿಧಾನಸಭಾ ಕ್ಷೇತ್ರಗಳ ವಿವರಗಳು

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ : –

ಕ್ರ ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು	ಕ್ರ ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು
1	ಆನೇಕಲ್	21	ಚಿಂತಾಮಣಿ
2	ದೇವನಹಳ್ಳಿ	22	ಗೌರಿಬಿದನೂರು
3	ಹೊಸಕೋಟೆ	23	ಚಿಕ್ಕನಾಯಕನಹಳ್ಳಿ
4	ಕನಕಪುರ	24	ಕೊರಟಗೆರೆ
5	ಮಾಗಡಿ	25	ಬಂಗಾರಪೇಟೆ
6	ತುಮಕೂರು ಗ್ರಾಮೀಣ	26	ನೆಲಮಂಗಲ
7	ಜಗಳೂರು	27	ಶ್ರೀನಿವಾಸಪುರ
8	ತಿಪಟೂರು	28	ರಾಮನಗರ
9	ಗುಬ್ಬಿ ಭಾಗ – 1	29	ಚಿಕ್ಕಬಳ್ಳಾಪುರ

ಕ್ರ ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು	ಕ್ರ ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು
10	ಕುಣಿಗಲ್	30	ಚನ್ನಪಟ್ಟಣ
11	ಮಧುಗಿರಿ	31	ತುರುವೇಕೆರೆ
12	ಶಿರಾ	32	ಚಿತ್ರದುರ್ಗ
13	ಬಾಗೇಪಲ್ಲಿ	33	ಹೊಳಲ್ಕೆರೆ
14	ಶಿಡ್ಲಘಟ್ಟ	34	ಚಳ್ಳಕೆರೆ
15	ಹೊಸದುರ್ಗ	35	ಮುಳಬಾಗಿಲು
16	ಚನ್ನಗಿರಿ	36	ಮೊಳಕಾಲ್ಮೂರು
17	ಹರಪನಹಳ್ಳಿ	37	ಕೋಲಾರ
18	ಹೊನ್ನಾಳಿ	38	ದಾವಣಗೆರೆ
19	ಹಿರಿಯೂರು	39	ಹರಿಹರ
20	ದೊಡ್ಡಬಳ್ಳಾಪುರ	40	ಗುಬ್ಬಿ – 2

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ : –

ಕ್ರ.ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು	ಕ್ರ.ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು
1	ನಂಜನಗೂಡು	6	ಪಾಂಡವಪುರ
2	ಹುಣಸೂರು	7	ಕೆ.ಆರ್. ಪೇಟೆ
3	ಹೆಚ್.ಡಿ.ಕೋಟೆ	8	ನಾಗಮಂಗಲ
4	ಚಾಮರಾಜನಗರ	9	ಹೊಳೆನರಸೀಪುರ
5	ಕೊಳ್ಳೇಗಾಲ	10	ಅರಸೀಕೆರೆ

ಹುಬ್ಬಳ್ಳಿ ವಿದ್ಯುತ್ ಸರಬರಾಜು ನಿಗಮ ನಿಯಮಿತ : –

ಕ್ರ.ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು	ಕ್ರ.ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು
1	ನವಲಗುಂದ	18	ಬಸವನಬಾಗೇವಾಡಿ
2	ಕಲಘಟಗಿ	19	ಇಂಡಿ
3	ನರಗುಂದ	20	ಸಿಂಧಗಿ
4	ಲಕ್ಷ್ಮೇಶ್ವರ	21	ಮುಧೋಳ

ಕ್ರ.ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು	ಕ್ರ.ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು
5	ರೋಣ	22	ಬಾಗಲಕೋಟೆ
6	ರಾಣಿಬೆನ್ನೂರು	23	ಬಿಜಾಪುರ
7	ಬ್ಯಾಡಗಿ	24	ಧಾರವಾಡ ಪೂರ್ವ, (ಗ್ರಾಮೀಣ)
8	ಹಿರೇಕೆರೂರು	25	ರೋಣ
9	ಸವದತ್ತಿ	26	ಗದಗ
10	ರಾಮದುರ್ಗ	27	ಕುಂದಗೋಳ
11	ಗೋಕಾಕ್	28	ಹಾವೇರಿ
12	ಅಥಣಿ	29	ಹಾನಗಲ್
13	ಬಾದಾಮಿ	30	ರಾಯಭಾಗ
14	ಹುನಗುಂದ	31	ಸದಲಗ ಚಿಕ್ಕೋಡಿ
15	ಬೀಳಗಿ	32	ಬೆಳಗಾಂ
16	ಜಮಖಂಡಿ	33	ಖಾನಾಪುರ
17	ಮುದ್ದೆಬಿಹಾಳ	34	ಹುಬ್ಬಳ್ಳಿ ಗ್ರಾಮೀಣ

ಗುಲ್ಬರ್ಗಾ ವಿದ್ಯುತ್ ಸರಬರಾಜು ನಿಗಮ ನಿಯಮಿತ : –

ಕ್ರ.ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು	ಕ್ರ.ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು
1	ಔರಾದ್	15	ಶೋರಾಪುರ
2	ಭಾಲ್ಕಿ	16	ಕೂಡ್ಲಿಗಿ
3	ಹುಮ್ನಾಬಾದ್	17	ಹಗರಿಬೊಮ್ಮನಹಳ್ಳಿ
4	ಬಸವಕಲ್ಯಾಣ	18	ಹಡಗಲಿ
5	ಗುಲ್ಬರ್ಗಾ ಉತ್ತರ * ದಕ್ಷಿಣ	19	ಬಳ್ಳಾರಿ * ಕುರುಗೋಡ್
6	ಗುಲ್ಬರ್ಗಾ ಗ್ರಾಮೀಣ	20	ಸಂಡೂರು
7	ಅಫಜಲ್‌ಪುರ	21	ಮಸ್ಕಿ
8	ಆಳಂದ	22	ಲಿಂಗಸುಗೂರು

ಕ್ರ.ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು	ಕ್ರ.ಸಂ.	ವಿಧಾನ ಸಭಾ ಕ್ಷೇತ್ರದ ಹೆಸರು
9	ಜೇವರ್ಗಿ	23	ಕೊಪ್ಪಳ ಕ್ಷೇತ್ರ
10	ಚಿತ್ತಾಪುರ	24	ಯಲಬುರ್ಗಾ
11	ಚಿಂಚೋಳಿ	25	ಕೂಡ್ಲಿಗಿ
12	ಸೇಡಂ	26	ಗಂಗಾವತಿ
13	ಯಾದಗಿರಿ * ಗುರುಮಿತ್ತಲ್	27	ಕನಕಗಿರಿ
14	ಶಹಾಪುರ	28	ಕುಷ್ಟಗಿ

ಕರ್ನಾಟಕ ವಿಧಾನ ಸಭೆ

854

ಶ್ರೀ ಗೋಪಾಲ ಭಂಡಾರಿ ಹೆಚ್

ಅ) ಇತ್ತೀಚಿನ ದಿನಗಳಲ್ಲಿ ಆನ್‌ಲೈನ್‌ನಲ್ಲಿ ಹೊಸ ರೇಷನ್ ಕಾರ್ಡಿಗಾಗಿ ಅರ್ಜಿ ಸಲ್ಲಿಸಿದವರ ಪೈಕಿ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ರೇಷನ್ ಕಾರ್ಡುಗಳು ವಿತರಣೆ ಆಗಿದೆ;

ಆ) ಉಳಿದ ಅರ್ಜಿದಾರರಿಗೆ ಯಾವಾಗ ಕಾರ್ಡು ವಿತರಿಸಲಾಗುವುದು;

ಇ) ರೇಷನ್ ಕಾಡಿಗೆ ಹೆಸರು ಸೇರಿಸಲು ತಿದ್ದುಪಡಿ ಮಾಡಲು ಮತ್ತು ಹೊಸ ಕಾರ್ಡಿಗೆ ಅರ್ಜಿ ಸಲ್ಲಿಸಲು ಮುಂದೆ ಅವಕಾಶ ಇದೆಯೇ?

ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು.

ಅ) ದಿನಾಂಕ : 22.07.2012 ರವರೆಗೆ 'ಆನ್‌ಲೈನ್' ಆಗಿ ಸ್ವೀಕರಿಸಲಾದ ಅರ್ಜಿಗಳು, ವಿವಿಧ ಹಂತಗಳಲ್ಲಿ ಪರಿಶೀಲನೆಯಲ್ಲಿರುವ ಅರ್ಜಿಗಳು ಹಾಗೂ ನೀಡಲಾದ ಪಡಿತರ ಚೀಟಿಗಳ ತಾಲ್ಲೂಕುವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಆ) ಬಹಳ ಸಂಖ್ಯೆಯಲ್ಲಿ ಅರ್ಜಿಗಳು ಬಂದಿರುವುದರಿಂದ ಮತ್ತು ಸಿಬ್ಬಂದಿ ಕೊರತೆ ಇರುವುದರಿಂದ ಪಡಿತರ ಚೀಟಿ ನೀಡಲು ನಿರ್ದಿಷ್ಟ ಸಮಯವನ್ನು ನಿಗದಿ ಪಡಿಸಿರುವುದಿಲ್ಲ. ಆದರೆ ಅರ್ಜಿದಾರರು ಫೋಟೋ ಮತ್ತು ಬೆರಳಚ್ಚು ಬಯೋಮೆಟ್ರಿಕ್ ಅನ್ನು ನೀಡಿ ಸಹಕರಿಸಿದಲ್ಲಿ ಶೀಘ್ರದಲ್ಲಿ ಪಡಿತರ ಚೀಟಿ ನೀಡಲಾಗುವುದು.